ಗೋವಿನ ಜೋಳ : ಆಹಾರ ಬೆಳೆಗಳ ರಾಜ

ಬ. ಮ. ಚಿತ್ತಾಪೂರ ಮತ್ತು ರಾಜಕುಮಾರ
ಕೃಷಿ ಮಹಾವಿದ್ಯಾಲಯ ರಾಯಚೂರು – ೫೮೪ ೧೦೧
☎: ೯೪೮೦೬ ೯೬೩೦೯ ಮಿಂಚಂಚೆ: chittapurbm@yahoo.com

ಜನ ಜಾನುವಾರುಗಳ ಆಹಾರದಲ್ಲಿನ ಪ್ರಮುಖ ಭಾಗವಾಗಿರುವ ಗೋವಿನ ಜೋಳವನ್ನು ಕೈಗಾರಿಕಾ ಕ್ಷೇತ್ರದಲ್ಲಿ ಕೂಡ ಉಪಯೋಗಿಸಲಾಗುತ್ತಿದೆ. ಮಳೆಯ ಅನಿಶ್ಚಿತತೆಯಲ್ಲಿ ಒಣ ಭೂಮಿಯಲ್ಲಿ ಸುಸ್ಥಿರ ಕೃಷಿಗೆ ಈ ಬೆಳೆ ಸಹಾಯಕಾರಿ. ಬೇಸಿಗೆಯ ಎರಡು ತಿಂಗಳು ಬಿಟ್ಟು, ಉಳಿದಂತೆ ಹಂಗಾಮುಗಳ ಹಂಗು ಇದಕ್ಕಿಲ್ಲ. ಅವಶ್ಯಕತೆಯಿದ್ದಲ್ಲಿ ಮಾತ್ರ ರಾಸಾಯನಿಕ ಗೊಬ್ಬರಗಳನ್ನು ಬಳಸಬೇಕಾಗಬಹುದು. ಈ ಬೆಳೆಯು ಭೂಮಿಯಲ್ಲಿನ ಪೋಷಕಾಂಶಗಳನ್ನು ಅಧಿಕ ಪ್ರಮಾಣದಲ್ಲಿ ಬಳಸಿಕೊಳ್ಳುವುದರಿಂದ ಮಣ್ಣಿನ ಪುನಃಶ್ಚೇತನ ಅವಶ್ಯಕ. ಗೋವಿನ ಜೋಳದ ಬೇಸಾಯ ಕುರಿತು ಈ ಲೇಖನ ವಿವರ ನೀಡುತ್ತದೆ.

ನೀರಿನ ಕೊರತೆಯನ್ನು ಸಹಿಸಿಕೊಳ್ಳುವ ಬೆಳೆಗಳಲ್ಲಿ ಜೋಳವನ್ನು "ಒಣಭೂಮಿಯ ಒಂಟೆ" ಯೆಂದು ಪರಿಗಣಿಸಿದರೆ ನೀರಿನ ಸಮಸ್ಯೆ ಇಲ್ಲದೆಡೆ ಮತ್ತು ಪೂರೈಕೆ ಉತ್ತಮವಾಗಿದ್ದೆಡೆಗಳಲ್ಲಿ ಗೋವಿನ ಜೋಳಕ್ಕೆ ಸರಿಸಾಟಿಯಾದ ಆಹಾರಧಾನ್ಯದ ಬೆಳೆ ಇನ್ನೊಂದಿಲ್ಲವೆನ್ನಬಹುದು. ಸಿ–೪ ದ್ಯುತಿಸಂಶ್ಲೇಷಣೆ ಕ್ರಿಯೆಯನ್ನು ಹೊಂದಿರುವ ಗೋವಿನ ಜೋಳದ ಬೆಳೆ ಹೆಕ್ಟೇರ್‌ಗೆ ಸುಮಾರು ೧೦೦ ಕ್ವಿಂಟಾಲ್‌ಗಿಂತಲೂ ಅಧಿಕ ಇಳುವರಿ ನೀಡುವ ಸಾಮರ್ಥ್ಯ ಪಡೆದಿದೆ. ಹೀಗಾಗಿ ಜಗತ್ತಿನಲ್ಲಿ ಎಲ್ಲ ಬೆಳೆಗಳಿಗಿಂತಲೂ ಹೆಚ್ಚು ಇಳುವರಿ ನೀಡುವ ಸಾಮರ್ಥ್ಯವನ್ನೂ ಹೊಂದಿದ ಬೆಳೆಯೆಂದೂ ಕೂಡ ಖ್ಯಾತಿ ಪಡೆದಿದೆ. ಹಲವಾರು ವಿಶೇಷ ಗುಣಗಳಿಂದ ಇದೊಂದು ಅನಿವಾರ್ಯ ಬೆಳೆಯಾಗಿಯೂ ಕೂಡ ಹೊರಹೊಮ್ಮುತ್ತಿದೆ. ಅನಿಶ್ಚಿತ ಮಳೆ, ಅಚ್ಚುಕಟ್ಟು ಪ್ರದೇಶಗಳಲ್ಲಿ ತಡವಾಗಿ ಕಾಲುವೆಗಳಲ್ಲಿ ನೀರಿನ ಬಿಡುಗಡೆ

ಹ್ಯಾಪಿ ಸೀಡರ್‌ದಿಂದ ಗೋವಿನಜೋಳದಲ್ಲಿ ಶೂನ್ಯ ಬೇಸಾಯ

ಮತ್ತು ಬೇಗನೆ ನೀರಿನ ಪೂರೈಕೆ ನಿಲ್ಲಿಸುತ್ತಿರುವ ಪರಿಸ್ಥಿತಿಗೆ ಗೋವಿನ ಜೋಳದ ಸೂಕ್ತತೆ ಮತ್ತು ನಿರ್ವಹಣೆಯ ವಿಷಯವನ್ನು ಇಲ್ಲಿ ವಿವರಿಸಲಾಗಿದೆ.

ಬಹಳ ಪ್ರಮುಖ ಅಂಶವೆಂದರೆ ಗೋವಿನ ಜೋಳವು ಕೇವಲ ಆಹಾರ ಬೆಳೆಯಾಗಿರದೆ ಒಂದು ಕೈಗಾರಿಕಾ ಬೆಳೆ ಮತ್ತು ಬಹೂಪಯೋಗಿ ಬೆಳೆ. ಜೋಳದಂತೆ ಮನೆಯಲ್ಲಿ ರೊಟ್ಟಿ, ನುಚ್ಚು/ರವೆ ಉಪ್ಪಿಟ್ಟು, ಗಂಜಿ, ಬಾಂಬೆ ರವೆ ಲಾಡುಗಳಿಗಲ್ಲದೆ ಸ್ಟಾರ್ಚ್, ಗ್ಲುಕೋಜ ಸಕ್ಕರೆ, ಇಥೆನಾಲ್ (ಸದ್ಯಕ್ಕೆ ಈ ಉದ್ದೇಶದ ಬಳಕೆಗೆ ಜಾಗತಿಕ ನಿಷೇಧವಿದೆ). ಕಾರ್ನ ಆಯಿಲ್ ಕೈಗಾರಿಕೆಗಳಲ್ಲಿ ಅಲ್ಲದೆ ಗೋವಿನ ಜೋಳದ ಅವಲಕ್ಕಿ ಮತ್ತು ಕಾರ್ನ ಫ್ಲೇಕ್ಸ್, ಪಾಪ್‌ಕಾರ್ನ್, ಸ್ವೀಟ್ ಕಾರ್ನ್, ಕಾರ್ನ್‌ಸೂಪ್ ಮುಂತಾದ ಹೊಸ ನಮೂನೆಯ ಜಗದ್ವ್ಯಾಪಿ ಜನಪ್ರಿಯ ಖಾದ್ಯ ಪದಾರ್ಥಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಬಹುಷ: ಗೋವಿನಜೋಳದ ಅತಿ ಹೆಚ್ಚಿನ ಖಾದ್ಯ ಪದಾರ್ಥಗಳು ಮಾರುಕಟ್ಟೆಗಳಲ್ಲಿ/ಮಾಲುಗಳಲ್ಲಿ ಇದೀಗ ಲಭ್ಯ. ಹೀಗೆ ಬೆಳೆಗೆ ನಿತ್ಯದ ಆಹಾರ ತಯಾರಿಕೆಯಲ್ಲಿಯೂ ಮತ್ತು ಕೈಗಾರಿಕೆಗಳಲ್ಲೂ ಎಲ್ಲಿಲ್ಲದ ಬೇಡಿಕೆ. ಅಲ್ಲದೇ ಕೋಳಿ ಮತ್ತು ಜಾನುವಾರುಗಳ ಕಾನ್ಸಂಟ್ರೇಟ್ (ಪೋಷಕಾಂಶಭರಿತ) ಆಹಾರ ತಯಾರಿಕೆಯಲ್ಲಿಯೂ ಗೋವಿನ ಜೋಳವನ್ನು ಬಳಸಲಾಗುತ್ತದೆ.

ಬೆಳೆಗೆ ಬಿತ್ತನೆ ಮಾಡಲು ಇಂತಹುದೆ ಹಂಗಾಮು ಆಗಬೇಕಿಲ್ಲ. ಯಾವುದೇ ಹಂಗಾಮಿನಲ್ಲಿಯೂ ಬೇಸಾಯ ಮಾಡಬಹುದಾದಂತಹ ಬೆಳೆ. ಅತಿ ಉಷ್ಣತೆಯನ್ನು ಹೊಂದಿರುವ ಬೇಸಿಗೆಯ ಏಪ್ರಿಲ್ ಮತ್ತು ಮೇ ತಿಂಗಳುಗಳು ಬೇಸಾಯಕ್ಕೆ ನಿಷಿದ್ಧ. ಏಕೆಂದರೆ ದಿನದ ಉಷ್ಣಾಂಶ ೪೦ ಡಿಗ್ರಿ ಸೆಲ್ಸಿಯಸ್‌ಕ್ಕಿಂತಲೂ ಅಧಿಕವಾಗಿದ್ದಾಗ ಪರಾಗರೇಣುಗಳು ನಿಶ್ಯಕ್ತವಾಗುವುದರಿಂದ ಬೀಜಾಂಕುರವಾಗುವುದಿಲ್ಲ. ಉಳಿದಂತೆ ಹಂಗಾಮಿನ ಅವಧಿಯ ಬಗ್ಗೆ ತಲೆಕೆಡಿಸಿಕೊಳ್ಳದೆ ಯಾವಾಗಲಾದರೂ ಬಿತ್ತನೆ ಮಾಡಬಹುದು. ಅಂದರೆ ಬಿತ್ತನೆ ತಿಥಿ ಅಷ್ಟೊಂದು ನಿಖರವಾಗಿರಬೇಕೆಂದೇನಿಲ್ಲ. ಮುಂಗಾರಿನಲ್ಲಿ ಮಳೆಯಾದ ತಕ್ಷಣ ಬಿತ್ತನೆ ಮಾಡಬಹುದು. ರಾಜ್ಯದ ಅರೆಮಲೆನಾಡು ಪ್ರದೇಶದಲ್ಲಿ ಬಿಟಿ ಹತ್ತಿಗೆ ಪ್ರಾಶಸ್ತ್ಯ ನೀಡುತ್ತಿದ್ದು, ಮಳೆಯಾಗುವುದು ತಡವಾದಲ್ಲಿ ಹತ್ತಿಯ ಬದಲಾಗಿ ಗೋವಿನಜೋಳದ ಬಿತ್ತನೆಗೆ ರೈತರು ಮುಂದಾಗುತ್ತಾರೆ. ಹತ್ತಿಗೆ ಹೋಲಿಸಿದಾಗ ಗೋವಿನಜೋಳಕ್ಕೆ ಬೇಕಾಗುವ ನೀರಿನ ಪ್ರಮಾಣ ಸುಮಾರು ಅರ್ಧದಷ್ಟು ಕಡಿಮೆ. ಹೀಗಾಗಿ ಗೋವಿನ ಜೋಳವು ಬಹುತೇಕ ಮುಂಗಾರಿ ಜೋಳದ ಪ್ರದೇಶವನ್ನು ಆಗಲೆ ಆಕ್ರಮಿಸಿದ್ದು ದೇಶದಲ್ಲಿ ಮೂರನೆಯ ಮುಖ್ಯ ಆಹಾರ ಬೆಳೆಯಾಗಿ ಜನಪ್ರಿಯವಾಗುತ್ತಿದೆ. ಸಜ್ಜೆ-ಜೋಳ ಬಳಸುತ್ತಿದ್ದ ಜನ ಇದೀಗ ದಿನ ನಿತ್ಯದ ಆಹಾರದಲ್ಲಿ ಗೋವಿನ ಜೋಳ ಬಳಸುವತ್ತ ಹೆಜ್ಜೆ ಹಾಕಿದ್ದಾರೆ.

ಮುಂಗಾರಿನಲ್ಲಿ ಜೂನ್‌ನಲ್ಲಿ ಹದವಾಗಿ ತಯಾರಿಸಿದ ನೆಲದಲ್ಲಿ ಹಸಿ ಮಳೆಯಾದ ತಕ್ಷಣ ಬಿತ್ತನೆ ಮಾಡಬಹುದು. ಮಳೆ ತಡವಾದಲ್ಲಿ ಜೂನ್ ಕೊನೆಯವರೆಗೆ ಬಿತ್ತನೆ ಮಾಡಬಹುದು. ಮಳೆಯಾಶ್ರಯದಲ್ಲಿ ಎರಡು ಬೆಳೆ ಯೋಜನೆಯಿರದಿದ್ದರೆ ಜುಲೈನಲ್ಲಿ ಮಳೆಯಾದಾಗ ಬಿತ್ತನೆ ಮುಂದುವರಿಸಬಹುದು. ಉತ್ತರದ ಒಳನಾಡು ಪ್ರದೇಶದಲ್ಲಿ ಅಂದರೆ ಮಲಪ್ರಭಾ ಎಡದಂಡೆ ಕಾಲುವೆ ಪ್ರದೇಶದಲ್ಲಿ ಕಾಲುವೆಯಲ್ಲಿ ನೀರು ಬಿಟ್ಟ ನಂತರ ಜುಲೈ ತಿಂಗಳಲ್ಲಿ ಬಿತ್ತನೆ ಮಾಡುವುದುಂಟು. ನಂತರದಲ್ಲಿ ಎರಡನೆಯ ಬೆಳೆಯಾಗಿ ಕಡಲೆಯನ್ನು ಗೋವಿನ ಜೋಳದ ಕಟಾವಿನ ನಂತರ ಬಿತ್ತನೆ ಮಾಡುವುದು ಸಾಮಾನ್ಯ ಮತ್ತು ಲಾಭದಾಯಿಕ ಬೆಳೆ ಪದ್ಧತಿಯಾಗಿದೆ. ಜುಲೈ ತಿಂಗಳ ಕೊನೆಯಲ್ಲಿ ಕಾಲುವೆಯಲ್ಲಿ ನೀರು ಬಿಡಲಾಗುವ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿಯೂ ಕೂಡ ಈ ಪದ್ಧತಿಯನ್ನು ಅನುಸರಿಸಬಹುದಾಗಿದೆ.

ಬೆಳೆ ಬಿತ್ತುವಾಗ ಇಂತಿಷ್ಟೇ ಸಸಿಗಳ ಸಂಖ್ಯೆಯನ್ನು ಬಳಸಬೇಕೆಂದು ಶಿಫಾರಸು ಮಾಡಲಾಗಿದೆ. ಸಸಿಗಳ ಸಂಖ್ಯೆ ಹೆಚ್ಚಾದಲ್ಲಿ ಫಲ ನೀಡದ ಸಸಿಗಳ ಸಂಖ್ಯೆ ಹೆಚ್ಚಾಗುತ್ತದೆ. ಸಸ್ಯ ಪೈಪೋಟಿಯಿಂದಾಗಿ ಇಳುವರಿ ಕಡಿಮೆಯಾಗಬಹುದು. ಆದರೆ ಗಮನಿಸಬೇಕಾದ ಅಂಶವೆಂದರೆ ಸಸಿಗಳ ನಡುವಿನ ಅಂತರ. ಅಂದರೆ, ಬೆಳೆಯಲ್ಲಿನ ಸಾಲುಗಳ ಅಂತರ ಮತ್ತು ಸಾಲಿನಲ್ಲಿಯ ಸಸಿಗಳ ಅಂತರ. ಸಾಲುಗಳ ಅಂತರ ೬೦ - ೭೫ ಸೆಂ. ಮೀ. ನಿಂದ ೯೦ ಸೆಂ.ಮೀ. ಇದ್ದು ಸಾಲುಗಳಲ್ಲಿ ಸಸಿಯಿಂದ ಸಸಿಗೆ ೨೦ ಸೆಂ.ಮೀ. ಇದ್ದರೆ ನೀರಿನ ಕೊರತೆಯಾಗದಿದ್ದರೆ ಇಳುವರಿಯಲ್ಲಿ ಹೆಚ್ಚಿನ ವ್ಯತ್ಯಾಸವಾಗದಿರುವುದು ಕಂಡು ಬಂದಿದೆ. ಸಾಮಾನ್ಯವಾಗಿ ನೀರಾವರಿಯಲ್ಲಿ ಹೆಚ್ಚಿನ ಸಸಿಗಳ ಸಂಖ್ಯೆ ಬಳಸುತ್ತಿದ್ದರೂ (೬೦x೨೦ ಸೆಂ.ಮೀ.) ಮಳೆಯಾಶ್ರಿತ ಬೇಸಾಯದಲ್ಲಿ ಅಗಲದ ಸಾಲುಗಳಲ್ಲಿ ಬಿತ್ತಿ, ಸಾಲು ಮಧ್ಯದಲ್ಲಿ ಪ್ರದೇಶವೊಂದರ ಮಳೆಯ ಪ್ರಮಾಣ ನೋಡಿಕೊಂಡು ಸೋಯಾಬೀನ್ (೧:೨), ಮೇವಿನ ಅಲಸಂದೆ ಅಥವಾ ಸಣಬು (೧:೨) (ಮೇವಿಗಾಗಿ ಇಲ್ಲವೆ ೪೫ ರಿಂದ ೫೦ ದಿನಗಳಲ್ಲಿ ಕತ್ತರಿಸಿ ಹಸಿರೆಲೆ ಗೊಬ್ಬರದಂತೆ ಭೂಮಿಗೆ ಸೇರಿಸಿ/ಭೂಮಿಯ ಮೇಲೆ ಹರಡಿ) ಮತ್ತು ದೀರ್ಘಾವಧಿ ಬೆಳೆಯಾದ ತೊಗರಿಯನ್ನು (೨:೧) ನಿರ್ದಿಷ್ಟ ಸಾಲು ಅನುಪಾತದಲ್ಲಿ ಬಿತ್ತನೆ ಮಾಡಲು ಶಿಫಾರಸ್ಸು ಮಾಡಲಾಗಿದೆ.

ಅಚ್ಚುಕಟ್ಟು ಪ್ರದೇಶಗಳಲ್ಲಿ ತಡವಾಗಿ ನೀರು ಬಿಟ್ಟಾಗ ಮೊದಲ ಬೆಳೆಯಾಗಿ ಸೂರ್ಯಪಾನ ಮತ್ತು ಎರಡನೆಯ ಬೆಳೆಯಾಗಿ ಗೋವಿನ ಜೋಳವನ್ನು ಬಿತ್ತನೆ ಮಾಡಬಹುದು. ಇಲ್ಲವೇ, ಗೋವಿನ ಜೋಳವನ್ನು ಮೊದಲ, ಸೂರ್ಯಪಾನ ಅಥವಾ ಗೋದಿಯನ್ನು ಎರಡನೆಯ ಬೆಳೆಯಾಗಿ ಬೆಳೆಸಬಹುದು. ಆದರೆ ಕಡಲೆಯಂತಹ ಬೆಳೆಯನ್ನು ಎರಡನೆಯ ಬೆಳೆಯಾಗಿ ಬೆಳೆದಾಗ ಕಡಲೆ ಬಿತ್ತನೆ ಸಾಮಾನ್ಯ ಸಮಯಕ್ಕಿಂತಲೂ ತಡವಾದಂತಾಗುತ್ತದೆ. ಇಂತಹ

ಸಂದರ್ಭಗಳಲ್ಲಿ ಗೋವಿನ ಜೋಳದಲ್ಲಿ ತೆನೆಕಾಳು ಗಟ್ಟಿಯಾಗುವಾಗ ಗೋವಿನ ಜೋಳದ ಕಾಂಡದ ತೆನೆಯ ಮೇಲಿನ ಭಾಗವನ್ನು ಕಟಾವು ಮಾಡಿ ನಿಂತ ಬೆಳೆಯಲ್ಲಿಯೇ ಎತ್ತುಗಳನ್ನು ಬಳಸಿ, ನೇಗಿಲು ಸಾಲುಗಳ ಹಿಂದೆ ಬುಕ್ಕಾ ಅಥವಾ ಎಳಸೆಡ್ಡಿಯ ಮೂಲಕ ಕಡಲೆಯ ಬಿತ್ತನೆಯ ಸಾಧ್ಯಾಸಾಧ್ಯತೆಗಳನ್ನು ಯೋಚನೆ ಮಾಡಬಹುದಾಗಿದೆ ಮತ್ತು ಸಮಯದ/ನೀರಿನ ಲಭ್ಯತೆಯ ಅವಧಿಯ ಸದುಪಯೋಗ ಮಾಡಿಕೊಳ್ಳಬಹುದಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕಳೆದ ವರ್ಷ ಮುಂಗಾರು ಹಂಗಾಮಿನ ನಾಟಿ ಭತ್ತದ ನಂತರ ಎರಡನೆಯ ಬೆಳೆಯಾಗಿ ಗೋವಿನ ಜೋಳವನ್ನು ಡಿಸೆಂಬರ್-ಜನವರಿ ತಿಂಗಳುಗಳಲ್ಲಿ ಶೂನ್ಯ ಉಳಮೆ (ಹ್ಯಾಪಿ ಸೀಡರ ಬಳಸಿ ನೇರ ಬಿತ್ತನೆ ಮತ್ತು ನಂತರದಲ್ಲಿ ಅಟ್ರಾಜಿನ್ ಕಳೆನಾಶಕ ಸಿಂಪರಣೆ) ಯೋಜನೆಯಲ್ಲಿ ಬೆಳೆಯಲು ಪ್ರಯತ್ನಿಸಲಾಯಿತು. ಭತ್ತದ ನಂತರ ಮಣ್ಣಿನ ಮೇಲ್ಪದರು ಒಣಗಿದ್ದರೆ ಗೋವಿನ ಜೋಳದ ಬಿತ್ತನೆಗೆ ಅಷ್ಟೊಂದು ತೊಂದರೆಯಾಗುವುದಿಲ್ಲ. ಮುಖ್ಯವಾಗಿ ನಿಗದಿತ ಸಸಿಗಳ ಸಂಖ್ಯೆ ಕಾಪಾಡುವುದು ಇಳುವರಿಯ ಮಟ್ಟವನ್ನು ನಿರ್ಧರಿಸುತ್ತದೆ. ಕಳೆದ ವರ್ಷ ಆಣೆಕಟ್ಟಿನ ಪಾತ್ರದಲ್ಲಿ ನೀರಿನ ಕೊರತೆಯಿಂದಾಗಿ ಜನವರಿ ನಂತರ ನಾಲೆಗಳಲ್ಲಿ ನೀರು ಬಿಡುವುದಿಲ್ಲವೆಂದು ಘೋಷಿಸಲಾಗಿತ್ತು. ಹೀಗೆ ಕಾಲುವೆಯ ನೀರಿನ ಲಭ್ಯತೆಯ ಅವಧಿ ಕಡಿಮೆ ಇರಬಹುದಾದ ಸಂದರ್ಭಗಳಲ್ಲಿ ಗೋವಿನ ಜೋಳದ ತೆನೆಯ ಮೇಲ್ಭಾಗ ಕತ್ತರಿಸಿ ಸರಪಳಿ (ರಿಲೆ) ಬೆಳೆ ಯೋಜನೆ ಇಲ್ಲವೆ ಶೂನ್ಯ ಉಳುಮೆಯಲ್ಲಿ ಎರಡನೆಯ ಬೆಳೆ ಬಿತ್ತನೆ ಹೆಚ್ಚು ಸಮಂಜಸ.

ಇದೀಗ ಗೋವಿನ ಜೋಳದಲ್ಲಿ ೯೦-೧೦೦ ದಿನಗಳಿಂದ ಹಿಡಿದು ೧೧೦-೧೨೦ ಮತ್ತು ೧೩೦-೧೪೦ ದಿನಗಳಲ್ಲಿ ಮಾಗುವ ತಳಿಗಳು/ಹೈಬ್ರಿಡ್‌ಗಳು ಲಭ್ಯವಿದ್ದು ಬೀಜ ಖರೀದಿಸುವಾಗ ಪ್ರದೇಶವೊಂದರ ನೀರಿನ ಲಭ್ಯತೆಗೆ ಅನುಗುಣವಾಗಿ ತಳಿ ಆಯ್ಕೆ ಮಾಡುವುದು ಸೂಕ್ತ.

ಗೋವಿಜೋಳದ ಬೇಸಾಯದಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಅಂಶವೆಂದರೆ ಪೋಷಕಾಂಶಗಳ ನಿರ್ವಹಣೆ. ಸಾಮಾನ್ಯವಾಗಿ ಗೋವಿನಜೋಳಕ್ಕೆ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರಗಳ ಅವಶ್ಯಕತೆಯಿದೆ ಎಂಬುದು ಸತ್ಯವಾದದು. ಕೃಷಿ ವಿಶ್ವವಿದ್ಯಾಲಯಗಳು ಹೆಕ್ಟೇರೊಂದಕ್ಕೆ ನೀರಾವರಿಯಲ್ಲಿ ೧೫೦:೭೫:೫೦ ಕಿ.ಗ್ರಾಂ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ನೀಡುವ ರಾಸಾಯನಿಕ ಗೊಬ್ಬರಗಳನ್ನು ಮತ್ತು ೨೫ ಕಿ. ಗ್ರಾಂ ಝಿಂಕ್ ಸಲ್ಫೇಟ್‌ನ್ನು ಮತ್ತು ೨೫ ಕಿ. ಗ್ರಾಂ ಕಬ್ಬಿಣದ ಸಲ್ಫೇಟ್‌ನ್ನು ಶಿಫಾರಸ್ಸು ಮಾಡಿವೆ. ಇದರಲ್ಲಿ ಸಾರಜನಕವನ್ನು ಎರಡರಿಂದ ಮೂರು ಹಂತಗಳಲ್ಲಿ ಕೊಡಬಹುದಾಗಿದೆ. ಅದೇ ರೀತಿಯಾಗಿ ಒಣ ಬೇಸಾಯದಲ್ಲಿ ೧೦೦:೫೦:೨೫ ಕಿ.ಗ್ರಾಂ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ನೀಡುವ ರಾಸಾಯನಿಕ ಗೊಬ್ಬರಗಳನ್ನು ಮತ್ತು ೧೦ ಕಿ. ಗ್ರಾಂ ಝಿಂಕ್ ಸಲ್ಫೇಟ್‌ನ್ನು ಶಿಫಾರಸ್ಸು ಮಾಡಲಾಗಿದೆ.

ಯಾವ ಬೆಳೆ ಹೆಚ್ಚಿನ ಇಳುವರಿ ನೀಡಲು ಶಕ್ತವಾಗಿದೆಯೋ ಅಂತಹ ಬೆಳೆ ಭೂಮಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಪೋಷಕಾಂಶಗಳನ್ನು ಹೀರುವುದು ಸಹಜ. ಒಂದು ವಿಷಯವೇನೆಂದರೆ, ಗೋವಿನ ಜೋಳದ ಬೆಳೆಯಲ್ಲಿ ಕಾಳಿನ ಇಳುವರಿಯ ೧೧೦-೧೨೦ ಪ್ರತಿಶತದಷ್ಟು ಮೇವಿನ ಇಳುವರಿ ಪಡೆಯಬಹುದಾಗಿದ್ದು ಸಾಧ್ಯವಾದಷ್ಟು ಇದರ ಬಹುಪಾಲನ್ನು ಭೂಮಿಗೆ ಸಾವಯವದಂತೆ ಮರುಕಳಿಸಿದರೆ ಒಳ್ಳೆಯದು. ರೋಟೋವೇಟರ್ ಇಲ್ಲವೆ ಹ್ಯಾಪಿ ಸೀಡರ್ ಈ ದೃಷ್ಟಿಯಿಂದ ಒಳ್ಳೆಯ ಟ್ರ್ಯಾಕ್ಟರ್‌ಚಾಲಿತ ಉಪಕರಣಗಳೆನ್ನಬಹುದು. ಹೀಗೆ ಸಾವಯವ ಪದಾರ್ಥವನ್ನು ಹೆಚ್ಚಿನ ಪ್ರಮಾಣದಲ್ಲಿ ಭೂಮಿಗೆ ಮರುಕಳಿಸಿದರೆ ಭೂಮಿಯ ಫಲವತ್ತತೆಯ ಸಂರಕ್ಷಣೆ ಸಾಧ್ಯ. ಇಂತಹ ವ್ಯವಸ್ಥೆಯಲ್ಲಿ ಎರಡನೆಯ ಬೆಳೆಯಲ್ಲಿ ಸೂಕ್ಷ್ಮ ಪೋಷಕಾಂಶಗಳ ಕೊರತೆಕೂಡ ಕಂಡು ಬಂದಿರುವುದಿಲ್ಲವೆಂದು ಗೋವಿನ ಜೋಳ ಬೇಸಾಯಗಾರರ ಅಭಿಪ್ರಾಯ.

ಒಟ್ಟಿನಲ್ಲಿ ಹೇಳುವುದಾದರೆ, ಗೋವಿನಜೋಳವು ಒಂದು ಸರ್ವ ಸಮರ್ಥ ಬೆಳೆಯಾಗಿದ್ದು ಲಾಭನಷ್ಟಗಳು ಬೆಳೆಯ ನಿರ್ವಹಣೆಯನ್ನು ಅವಲಂಬಿಸಿದೆಯೆನ್ನುವುದು ನಿರ್ವಿವಾದ.

****